# ಕ್ರಿಕೆಟ್ ಪುಳಕಕ್ಕೆ ಇಮೋಜಿ!




■ **ಶಶಿಕುಮಾರ್ ಸಿ.**

ವಾಟ್ಸ್‌ಆ್ಯಪ್ ಮೂಲಕ ಸಂದೇಶ ರವಾನಿಸುವ ಕ್ರಿಯೆಯಲ್ಲಿ ರಂಜನೆ ಹಾಗೂ ಭಾವುಕತೆ ತಂದದ್ದು ವಾಟ್ಸ್‌ಆ್ಯಪ್ ಇಮೋಜಿಗಳು. ಅವುಗಳ ಬೆನ್ನಹಿಂದೆಯೇ ಬಂದ ವಿವಿಧ ರೀತಿಯ ವಾಟ್ಸ್‌ಆ್ಯಪ್ ಸ್ಟಿಕರ್‌ಗಳು ಬಳಕೆದಾರರ ಮೆಚ್ಚುಗೆ ಪಡೆದಿದ್ದವು. ಅಂತಹ ಸ್ಟಿಕರ್‌ಗಳ ಸಾಲಿಗೆ ಹೊಸ ಸೇರ್ಪಡೆ ಕ್ರಿಕೆಟ್ ಸ್ಟಿಕರ್‌ಗಳು.

ವಿಶ್ವಕಪ್ ಕ್ರಿಕೆಟ್ ರಸದೌತಣಕ್ಕೆ ಪೂರಕವಾಗಿ ವಾಟ್ಸ್‌ಆ್ಯಪ್ ಕ್ರಿಕೆಟ್ ಸ್ಟಿಕರ್‌ಗಳನ್ನು ಬಿಡುಗಡೆ ಮಾಡಿದೆ. ವಿಶ್ವಕಪ್ ಪ್ರಾರಂಭದ ವೇಳೆಗೆ ಇನ್ನಷ್ಟು ಕ್ರಿಕೆಟ್ ಸ್ಟಿಕರ್‌ಗಳು ಜಮಾಗೊಳ್ಳಲಿವೆ. ಇವುಗಳನ್ನು ಬಳಸಬೇಕಾದರೆ ಹೊಸ ವರ್ಶನ್‌ಗೆ ವಾಟ್ಸ್‌ಆ್ಯಪ್ ಅಪ್‌ಡೇಟ್ ಮಾಡಿಕೊಳ್ಳುವುದು ಕಡ್ಡಾಯ.

### ಡೌನ್‌ಲೋಡ್ ಹೇಗೆ?

ಲೇಟೆಸ್ಟ್ ವರ್ಶನ್‌ಗೆ ವಾಟ್ಸ್‌ಆ್ಯಪ್ ಅಪ್‌ಡೇಟ್ ಮಾಡಿದ ಬಳಿಕ ಅದನ್ನು ತೆರೆಯಿರಿ. ಚಾಟ್ ಮಾಡುವ ಬಾರ್‌ನ ಎಡಬದಿಯಲ್ಲಿ ಕಾಣುವ ಇಮೋಜಿ ಚಿಹ್ನೆ ಮೇಲೆ ಕ್ಲಿಕ್ಕಿಸಿ. ಹಾಗೆ ಕ್ಲಿಕ್ಕಿಸಿದ ಬಳಿಕ ಪ್ರತ್ಯೇಕ ಟೂಲ್ ಬಾರ್ ತೆರೆದುಕೊಳ್ಳುತ್ತದೆ.

ಅದರ ಎಡಬದಿಯಲ್ಲಿ ಕಾಣುವ ಪ್ಲಸ್ (+) ಚಿಹ್ನೆ ಮೇಲೆ ಕ್ಲಿಕ್ಕಿಸಿದರೆ ಸ್ಟಿಕರ್ ವಿಂಡೊ ಓಪನ್ ಆಗುತ್ತದೆ. ಅಲ್ಲಿ ಕಾಣುವ 'ಕ್ರಿಕೆಟ್ ಮ್ಯಾಚಪ್' ಅನ್ನು ಡೌನ್‌ಲೋಡ್ (ಕೆಳ ಬಾಣ ಗುರುತು) ಮಾಡಿ. ಡೌನ್‌ಲೋಡ್ ಆದ ಆ ಸ್ಟಿಕರ್‌ಗಳು ಚಾಟ್ ಬಾರ್‌ನ ಎಡಬದಿಯಲ್ಲಿ ಕಾಣುವ ಇಮೋಜಿ ಚಿಹ್ನೆಯನ್ನು ಕ್ಲಿಕ್ಕಿಸಿದರೆ ಕಾಣುತ್ತವೆ. ಅವುಗಳು ಬಳಕೆಗೆ ಲಭ್ಯ.

ಕಪ್ಪಿ, ಮೆರ್ರಿ ಆ್ಯಂಡ್ ಬ್ರೈಟ್, ಸಾಲ್ಬಿ, ಕೊಮೊ, ಶಿಬ ಇನು, ದ ಮಲಡ್ರಾಯಿಟ್ಸ್, ಕೊಕೊ, ಹ್ಯಾಚ್, ಫಿಯರ್‌ಲೆಸ್ ಆ್ಯಂಡ್ ಫ್ಯಾಬ್ಯುಲಸ್, ಬನಾನ, ಬಿಸ್ಕೆಟ್ – ಹೀಗೆ ಬೇರೆ ಬೇರೆ ಹೆಸರಿನ ನೂರಾರು ಸ್ಟಿಕರ್‌ಗಳು ಲಭ್ಯ. ಇವುಗಳನ್ನು ಸಹ ಮೇಲೆ ತಿಳಿಸಿದಂತೆ ಡೌನ್‌ಲೋಡ್ ಮಾಡಿಕೊಂಡು ಬಳಸಬಹುದು.

ಅವುಗಳು ಬೇಡವಾದರೆ, ಚಾಟ್ ಬಾರ್‌ನ ಎಡಬದಿಯ ಇಮೋಜಿ ಚಿಹ್ನೆ ಮೇಲೆ ಕ್ಲಿಕ್ಕಿಸಿದರೆ, ಪ್ರತ್ಯೇಕ ಟೂಲ್ ಬಾರ್ ತೆರೆದುಕೊಳ್ಳುತ್ತದೆ. ಅದರ ಎಡಬದಿಯಲ್ಲಿ ಕಾಣುವ ಪ್ಲಸ್ (+) ಚಿಹ್ನೆ ಮೇಲೆ ಕ್ಲಿಕ್ಕಿಸಿದರೆ ಸ್ಟಿಕರ್ ವಿಂಡೊ ಓಪನ್ ಆಗುತ್ತದೆ. ಅದರಲ್ಲಿ 'ಮೈ ಸ್ಟಿಕರ್ಸ್' ಆಪ್ಶನ್ ಕ್ಲಿಕ್ಕಿಸಿ ಬೇಡವಾದದ್ದನ್ನು ಆಯ್ಕೆ ಮಾಡಿ ಡಿಲಿಟ್ ಮಾಡಬಹುದು.

ಮತ್ತಷ್ಟು ಕೆಳಕ್ಕೆ ಸ್ಕ್ರಾಲ್ ಮಾಡಿದಾಗ ಕಾಣುವ, 'ಗೆಟ್ ಮೋರ್ ಸ್ಟಿಕರ್ಸ್' ಅನ್ನು ಕ್ಲಿಕ್ ಮಾಡಿದರೆ, ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿರುವ ವೈವಿಧ್ಯಮಯ ಥೀಮ್‌ನ ಸ್ಟಿಕರ್ ಆ್ಯಪ್‌ಗಳು ಕಾಣಿಸುತ್ತವೆ. ನಿಮಗಿಷ್ಟವಾಗಿರುವುದನ್ನು ಇನ್‌ಸ್ಟಾಲ್ ಮಾಡಿಕೊಳ್ಳಬಹುದು. ■

### ನಿಮ್ಮ ಸ್ಟಿಕರ್ ನೀವೇ ಮಾಡಿ

ವಾಟ್ಸ್‌ಆ್ಯಪ್‌ಗೆ ಒಗ್ಗುವಂತಹ ನಿಮ್ಮದೇ ಚಿತ್ರಗಳುಳ್ಳ ಸ್ಟಿಕರ್‌ಗಳನ್ನು ರೂಪಿಸಲು ನೆರವಾಗುವ ಆ್ಯಪ್‌ಗಳು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಸಾಕಷ್ಟಿವೆ. ಉದಾಹರಣೆಗೆ, ಗೂಗಲ್ ಪ್ಲೇ ಸ್ಟೋರ್‌ನಲ್ಲಿ 'Sticker Maker for WhatsApp' ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳಬಹುದು.

ಆ್ಯಪ್ ಓಪನ್ ಮಾಡಿದಾಗ 'ಕ್ರಿಯೇಟ್ ನ್ಯೂ ಸ್ಟಿಕರ್ ಪ್ಯಾಕ್' ಅಂತ ಕಾಣುತ್ತದೆ. ಅದನ್ನು ಕ್ಲಿಕ್ ಮಾಡಿ. ನಿರ್ದಿಷ್ಟ ಫೋಟೊವೊಂದನ್ನು ಅಪ್‌ಲೋಡ್ ಮಾಡಿದಾಗ, ಅದು ಇಮೇಜ್ ಎಡಿಟರ್‌ಗೆ ಬಂದು ಕೂರುತ್ತದೆ. ಸ್ಟಿಕರ್ ಮಾಡುವುದಕ್ಕಾಗಿ ಫೋಟೊವನ್ನು ಕ್ರಾಪ್ ಮಾಡಬೇಕು. ತೆರೆಯ ಮೇಲೆ ಕಾಣುವ ವಿವಿಧ ಆಪ್ಶನ್‌ಗಳನ್ನು ಬಳಸಿ ಫೋಟೊವನ್ನು ಮತ್ತಷ್ಟು ಅಂದವಾಗಿಸಿ ಸೇವ್ ಮಾಡಿ. ಉತ್ತಮ ಸ್ಟಿಕರ್‌ಗಳು ಸಿದ್ಧವಾಗುತ್ತವೆ. ಅದನ್ನು ಸಬ್‌ಮಿಟ್ ಮಾಡುವಾಗ, 'ಆ್ಯಡ್ ಟು ವಾಟ್ಸ್‌ಆ್ಯಪ್' ಸೂಚನೆ ಕಾಣುತ್ತದೆ. ಅದನ್ನು ಒತ್ತಿದರೆ, ಚಾಟಿಂಗ್ ಬಾರ್‌ನ ಎಡಬದಿಯ ಇಮೋಜಿ ಚಿಹ್ನೆಯನ್ನು ಕ್ಲಿಕ್ಕಿಸಿದಾಗ ನಿಮ್ಮ ಸ್ಟಿಕರ್‌ಗಳು ಕಾಣುತ್ತವೆ. ಅವುಗಳನ್ನು ವಾಟ್ಸ್‌ಆ್ಯಪ್‌ಗೆ ಮಾತ್ರ ಬಳಕೆ ಮಾಡಬಹುದು.